**ಕರ್ನಾಟಕ ಸರ್ಕಾರ**

ಸಂಖ್ಯೆ.ಸಿಆಸುಇ 2097 ಲೆಕ್ಕಪತ್ರ -ಬಿ 2020.

ಕರ್ನಾಟಕ ಸರ್ಕಾರ ಸಚಿವಾಲಯ,
ವಿಧಾನ ಸೌಧ,
ಬೆಂಗಳೂರು, ದಿನಾಂಕ 02-11-2020.

**ಸುತ್ತೋಲೆ**

ವಿಷಯ : 2020-21 ರ ಆರ್ಥಿಕ ವರ್ಷಕ್ಕೆ ಸಚಿವಾಲಯದ ಅಧಿಕಾರಿ / ನೌಕರರ ವೇತನದಿಂದ ಆದಾಯ ತೆರಿಗೆ ಕಟಾಯಿಸುವ ಬಗ್ಗೆ.

*****

ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆಯ ಲೆಕ್ಕಪತ್ರ-1 ವಿಭಾಗದಲ್ಲಿ ವೇತನ ಪಡೆಯುತ್ತಿರುವ ಕರ್ನಾಟಕ ಸರ್ಕಾರ ಸಚಿವಾಲಯದ ಗ್ರೂಪ್ ಎ, ಬಿ, ಸಿ ಮತ್ತು ಡಿ ವರ್ಗದ ಅಧಿಕಾರಿ/ನೌಕರರ [ನಿಯೋಜನೆ ಮೇಲೆ ಕಾರ್ಯನಿರ್ವಹಿಸುತ್ತಿರುವವರು ಒಳಗೊಂಡಂತೆ] ಪ್ರಸ್ತುತ ಆರ್ಥಿಕ ವರ್ಷ **2020-21ರ** ಅವಧಿಗೆ ಅಧಿಕಾರಿಗಳು/ನೌಕರರು ಲೆಕ್ಕಪತ್ರ ವಿಭಾಗ ಸಿದ್ಧಪಡಿಸಿರುವ **ನಮೂನೆಯಲ್ಲಿಯೇ** ಆದಾಯ ತೆರಿಗೆ ವಿವರಗಳನ್ನು ಭರ್ತಿ ಮಾಡಿ ಅಗತ್ಯ ಲಗತ್ತುಗಳೊಂದಿಗೆ ದಿನಾಂಕ **15-11-2020ರ** ಒಳಗೆ ಸಲ್ಲಿಸಲು ಕೋರಲಾಗಿದೆ.

ಬಟವಾಡೆ ಅಧಿಕಾರಿಯವರು ಆದಾಯ ತೆರಿಗೆ ಕಾಯ್ದೆಗಳ ಪ್ರಕಾರ ಈ ಕೆಳಗಿನಂತೆ ಆದಾಯ ತೆರಿಗೆಯನ್ನು ಕಡ್ಡಾಯವಾಗಿ ಕಟಾವಣೆ ಮಾಡಬೇಕಾಗಿದೆ.

***15 ಸೆಪ್ಟೆಂಬರ್ ರೊಳಗೆ 30% , 15 ಡಿಸೆಂಬರ್ ರೊಳಗೆ 60%, ಫೆಬ್ರವರಿ 2021 ಗೆ 100%***

ಆದುದರಿಂದ, ಪ್ರಸ್ತುತ ವರ್ಷದ ಆದಾಯ ತೆರಿಗೆ ವಿನಾಯಿತಿಯನ್ನು ಪಡೆಯಬಯಸುವ **ಅಧಿಕಾರಿ : ನೌಕರರು ಮಾಡಿರುವ ಹೂಡಿಕೆ / ಉಳಿತಾಯದ [Investment/Savings] ಬಗ್ಗೆ ರಸೀದಿ / ದಾಖಲೆಗಳ ಪ್ರತಿಗಳನ್ನು(Under Sl.No.4/7b/8/9/10 Requisite Proof) ಲೆಕ್ಕಪತ್ರ ವಿಭಾಗ ಸಿದ್ಧಪಡಿಸಿರುವ ನಮೂನೆಯೊಂದಿಗೆ ಕಡ್ಡಾಯವಾಗಿ ಲಗತ್ತಿಸಿ ಸಲ್ಲಿಸಬೇಕು. ಲಗತ್ತುಗಳು ಇಲ್ಲದೇ ಇದ್ದ ಪಕ್ಷದಲ್ಲಿ ನಮೂನೆಯಲ್ಲಿ ನಮೂದಿಸಿರುವ ಮಾಹಿತಿಯನ್ನು ಗಣನೆಗೆ ತೆಗೆದುಕೊಳ್ಳದೆ ಆದಾಯ ತೆರಿಗೆಯನ್ನು ಕಟಾಯಿಸಲಾಗುವುದು.** ಮಾಹಿತಿಯನ್ನು ನಮೂನೆಯಲ್ಲಿ ಸಲ್ಲಿಸದಿದ್ದಲ್ಲಿ ಮುಂಬರುವ ತಿಂಗಳುಗಳಲ್ಲಿ ನಿಯಮಾನುಸಾರ ಅವರುಗಳ ವೇತನದಿಂದ ಆದಾಯ ತೆರಿಗೆಯನ್ನು ಕಟಾವಣೆ ಮಾಡಲಾಗುವುದು.

ನಿಗಧಿತ ನಮೂನೆಯಲ್ಲಿ ಅಧಿಕಾರಿ/ನೌಕರರು ಸರಿಯಾದ **PAN NO.,** ದೂರವಾಣಿ ಸಂಖ್ಯೆ. ಜನ್ಮ ದಿನಾಂಕ ಮತ್ತು ಮನೆ ವಿಳಾಸವನ್ನು ಕಡ್ಡಾಯವಾಗಿ ನಮೂದಿಸಬೇಕು. ವೇತನ ಚೀಟಿಯಲ್ಲಿರುವ ***Date of Birth / PAN NO. ಸರಿಯಿದೆಯೇ*** ಎಂಬುದನ್ನು ಸಹ ಪರೀಕ್ಷಿಸಿಕೊಳ್ಳಬೇಕು ಹಾಗೂ ತಪ್ಪಾಗಿ ನಮೂದಾಗಿದ್ದಲ್ಲಿ ಕೂಡಲೇ ಅದನ್ನು ಆಡಳಿತ ಶಾಖೆ/ಲೆಕ್ಕಪತ್ರ ವಿಭಾಗದ ಗಮನಕ್ಕೆ ತಂದು ಸರಿಪಡಿಸಿಕೊಳ್ಳುವುದು.

**(ಅನಂತ್ ಎನ್ ಕಾಸ್ಕರ್)**
**ಸರ್ಕಾರದ ಜಂಟಿ ಕಾರ್ಯದರ್ಶಿ**
**ಸಿಆಸುಇ(ಸಿಬ್ಬಂದಿ)**

ಇವರಿಗೆ

1. ಸರ್ಕಾರದ ಎಲ್ಲಾ ವಿಶೇಷ : ಅಪರ : ಜಂಟಿ : ಉಪ : ಅಧೀನ ಕಾರ್ಯದರ್ಶಿಗಳು & ಶಾಖಾಧಿಕಾರಿಗಳು.
2. ಸರ್ಕಾರದ ಮುಖ್ಯ ಕಾರ್ಯದರ್ಶಿ : ಅಪರ ಮುಖ್ಯ ಕಾರ್ಯದರ್ಶಿ : ಪ್ರಧಾನ ಕಾರ್ಯದರ್ಶಿ : ಕಾರ್ಯದರ್ಶಿಗಳ ಆಪ್ತ ಕಾರ್ಯದರ್ಶಿಗಳು / ಆಪ್ತ ಸಹಾಯಕರು.
3. ಮಾನ್ಯ ಮುಖ್ಯ ಮಂತ್ರಿಗಳ : ಸಚಿವರುಗಳ ಆಪ್ತ ಶಾಖೆಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಆಪ್ತ ಕಾರ್ಯದರ್ಶಿಗಳು/ ವಿಶೇಷಾಧಿಕಾರಿಗಳು.
4. ಎಲ್ಲಾ ಇಲಾಖೆಗಳ ಸ್ವೀಕೃತಿ ಮತ್ತು ರವಾನೆ ಶಾಖೆಯ ಶಾಖಾಧಿಕಾರಿಗಳು – ಮಾಹಿತಿಗಾಗಿ ಮತ್ತು ಅಧಿಕಾರಿ/ನೌಕರರಿಗೆ ವಿತರಣೆಗಾಗಿ.
5. ಸೂಚನಾ ಫಲಕಕ್ಕೆ.